# ನನ್ನ ಮೊದಲ ತರಗತಿ

## ದೀಪಾಬಿಸ್ಟ್

***

ಉತ್ತರಾಖಂಡದ ದಿನೇಶ್ ಪುರದಲ್ಲಿರುವ ಅಜೀಂ ಪ್ರೇಮ್ಜಿ ಶಾಲೆಯಲ್ಲಿ ನಾನು 2012ರ ಫೆಬ್ರುವರಿ 6 ರಿಂದ ಕೆಲಸ ಮಾಡುತ್ತಿದ್ದೇನೆ. 2012ರ ಏಪ್ರಿಲ್ 10 ರಿಂದ ನಮ್ಮ ಶಾಲೆ ಕಾರ್ಯಾಚರಣೆ ಆರಂಭಿಸಿತು. ಇದಕ್ಕೂ ಒಂದು ತಿಂಗಳು ಮೊದಲು ನಾವು ದಿನೇಶ್ ಪುರ ಸುತ್ತಮುತ್ತ ಇರುವ ಮನೆಗಳಿಗೆ ಭೇಟಿ ನೀಡಿ ಪಾಲಕರಿಂದ ಮಾಹಿತಿಗಳನ್ನು ಸಂಗ್ರಹಿಸಿದೆವು. ಶಾಲೆಗೆ ಹೋಗುತ್ತಿರುವ ಮಕ್ಕಳು, ಅರ್ಧಕ್ಕೆ ಶಾಲೆಯನ್ನು ತೊರೆದವರು, ಹೀಗೆ ಶಾಲೆಯನ್ನು ಮಧ್ಯದಲ್ಲಿ ತೊರೆಯಲು ಕಾರಣಗಳೇನು, ಈಗ ಮತ್ತೆ ತಮ್ಮ ಓದನ್ನು ಮುಂದುವರಿಸಲು ಬಯಸಿದ್ದಾರೋ ಇಲ್ಲವೋ ಮುಂತಾದ ಮಾಹಿತಿಗಳನ್ನು ನಾವು ಸಂಗ್ರಹಿಸಿದೆವು. ಇದಾದ ಬಳಿಕ ನಾವು ಅಜೀಂ ಪ್ರೇಮ್ ಜಿ ಶಾಲೆಯ ಬಗ್ಗೆ ಅವರಿಗೆ ತಿಳಿಸಿದೆವು; ಶಾಲೆ ಕಾರ್ಯನಿರ್ವಹಿಸುವ ರೀತಿ, ಅದರ ಆಡಳಿತ ನಿರ್ವಹಣೆ, ಶಾಲೆಯಲ್ಲಿ ಮಕ್ಕಳಿಗೆ ಯಾವೆಲ್ಲ ಸೌಲಭ್ಯಗಳನ್ನು ನೀಡಲಾಗುತ್ತದೆ, ಸರ್ವರಿಗೂ ಶಿಕ್ಷಣ ಎಂಬ ಏಕೈಕ ಉದ್ದೇಶದಿಂದ ಈ ಶಾಲೆಯನ್ನು ಸ್ಥಾಪಿಸಲಾಗಿದೆ ಮುಂತಾದ ವಿವರಗಳನ್ನು ಅವರಿಗೆ ಒದಗಿಸಿದೆವು. ಇಂತಹ ಒಂದು ಅವಕಾಶವನ್ನು ಯಾರೊಬ್ಬರೂ ಕಳೆದುಕೊಳ್ಳಬಾರದು ಎಂದೂ ಅವರಿಗೆಲ್ಲ ಮನವರಿಕೆಯನ್ನು ಮಾಡಿದೆವು.

ದಿನೇಶ್ ಪುರದ ಭೌಗೋಳಿಕ ಪ್ರದೇಶ ಮತ್ತು ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳುವುದಾದರೆ ಇಲ್ಲಿರುವ ಹೆಚ್ಚಿನವರು ಬಾಂಗ್ಲಾದೇಶದಿಂದ ವಲಸೆ ಬಂದವರು. ಹಾಗಾಗಿ ಇವರಲ್ಲಿ ಬಹುತೇಕರು ಮಾತನಾಡುವ ಭಾಷೆ ಬೆಂಗಾಲಿ ಮತ್ತು ಪಂಜಾಬಿ. ಆರಂಭದ ದಿನಗಳಲ್ಲಿ ನಾವು ಮಕ್ಕಳ ಸಾಮಾಜಿಕ, ಆರ್ಥಿಕ ಮತ್ತು ಕೌಟುಂಬಿಕ ವಿದ್ಯಮಾನಗಳನ್ನು ಹಾಗೂ ಅವರ ಜೀವನೋಪಾಯಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿದೆವು. ಅವರೊಂದಿಗೆ ಮಾತುಕತೆ ನಡೆಸುವ ಹಾಗೂ ಆಟಗಳನ್ನು ಆಡುವ ಮೂಲಕ ಒಂದು ಬಾಂಧವ್ಯವನ್ನು ಬೆಸೆಯಲು ಬೇಕಾದ ಕ್ರಮಗಳನ್ನು ಕೈಗೊಂಡೆವು. ಆಟದಂತಹ ಮಾಧ್ಯಮದ ಮೂಲಕ ಅವರ ಸಾಮರ್ಥ್ಯಗಳಿಗೆ ತಕ್ಕಂತೆ ನಾವು ಪಾಠ ಮಾಡುವ ಯೋಜನೆ ನಮ್ಮದಾಗಿತ್ತು.

ನನಗೆ ನಿಜಕ್ಕೂ ಇದೊಂದು ಹೊಸ ಅನುಭವವಾಗಿತ್ತು. 2005 ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ ಪ್ರಕಾರ ತರಗತಿಗಳಲ್ಲಿ ಸ್ಥಳೀಯ ಭಾಷೆಗೆ ಅವಕಾಶ ನೀಡಬೇಕಾಗುತ್ತದೆ. ಇದರಿಂದ ನಾವೇ ದೂರ ನಿಂತಿದ್ದೇವೆ ಎಂಬುದು ನಮ್ಮ ಗಮನಕ್ಕೆ ಬಂದಿತ್ತು. ಈಗ ನಾವು ಈ ಅಂತರವನ್ನು ಮುಂದುವರಿಸಿಕೊಂಡು ಹೋಗುವುದು ಅಥವಾ ಮುಖಾಮುಖಿಯಾಗಿ ಈ ಸವಾಲುಗಳನ್ನು ಎದುರಿಸಿ ಅದರಿಂದ ಮುಂದೆ ಸಾಗುವುದು. ನಾವು ಈ ಸವಾಲನ್ನು ಸ್ವೀಕರಿಸಿದೆವು ಮತ್ತು ಮಕ್ಕಳಿಗೆ ಅವರದ್ದೇ ಭಾಷೆಯಾದ ಬೆಂಗಾಲಿಯಲ್ಲಿ ಮಾತನಾಡಲು ಅವಕಾಶವನ್ನು ನೀಡಿದೆವು. ಯಾವತ್ತು ನಾವು ಅವರ ಭಾಷೆಯನ್ನು ತಕ್ಕಮಟ್ಟಿಗೆ ಅರ್ಥಮಾಡಿಕೊಂಡು ಮಾತನಾಡಲು ಶುರು ಮಾಡಿದೆವೋ ಆಗ ಮಕ್ಕಳು ಹಿಂದಿಯಲ್ಲಿ ಮಾತನಾಡಲು ಆರಂಭಿಸಿದರು. ನಮ್ಮ ಕಾರ್ಯತಂತ್ರ ಕಾರ್ಯರೂಪಕ್ಕೆ ಬಂದಂತೆ ಕಾಣಿಸಿತ್ತು. ಹಾಗಾಗಿ ನಾವು ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಚಾಲ್ತಿಯಲ್ಲಿಟ್ಟೆವು.

> "ಈ ಘಟಕವು ವಿದ್ಯಾರ್ಥಿಗಳ ಮಾತೃಭಾಷೆ ಮತ್ತು ಶಾಲೆಯ ಭಾಷೆ ಬೇರೆ ಬೇರೆಯಾಗಿರುವುದರ ವಾಸ್ತವದ ಬಗ್ಗೆ ಇದೆ. ಇಂತಹ ಪರಿಸ್ಥಿತಿಗಳು ಸವಾಲಿನದ್ದಾಗಿರುತ್ತವೆ. ಈ ಘಟಕದ ಉದ್ದೇಶವು ಬಹುಭಾಷೆಯ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಮತ್ತು ಬಹುಭಾಷೆಯ ಬಗ್ಗೆ ಸಕಾರಾತ್ಮಕವಾದ ಧೋರಣೆ ತಳೆಯುವುದನ್ನು ಎತ್ತಿಹಿಡಿಯುವುದು. ವಾಸ್ತವವೇನೆಂದರೆ, ಬಹುಭಾಷಾ ಮಾಧ್ಯಮದ ಮೂಲಕ ಎಲ್ಲ ವಿದ್ಯಾರ್ಥಿಗಳಿಗೆ ಭಾಷೆ ಕಲಿಸಲು ಸಾಧ್ಯವಾಗುತ್ತದೆ ಎನ್ನುವುದು" ಎನ್.ಸಿ.ಎಫ್-2005

ನಮ್ಮ ಶಾಲೆಯ ಒಂದನೇ ತರಗತಿಯಲ್ಲಿ 30 ವಿದ್ಯಾರ್ಥಿಗಳಿದ್ದರು. ಅವರಲ್ಲಿ ರಾಣಿಮಂಡಲ್ (ನಿಜವಾದ ಹೆಸರಲ್ಲ) ಕೂಡ ಒಬ್ಬಳು. ಇತರರಿಗೆ ಹೋಲಿಸಿದರೆ ಆಕೆಯ ನಡವಳಿಕೆ ಸಲ್ಪ ಭಿನ್ನವಾಗಿತ್ತು. ಅಥವಾ ಆಕೆ ತನ್ನದೇ ಲೋಕದಲ್ಲಿ ಬಂದಿಯಾಗಿದ್ದಳು. ಇತರ ಮಕ್ಕಳಿಗೆ ಹೊಡೆಯುವುದು ಆಕೆಗೆ ಮಾಮೂಲಿ ಸಂಗತಿಯಾಗಿತ್ತು. ಕೆಲವೊಮ್ಮೆ ಕಚ್ಚುವ ತನಕವೂ ಹೋಗುತ್ತಿದ್ದಳು. ಯಾವ ಮಗುವೂ ಕೂಡ ಆಕೆಯೊಂದಿಗೆ ಮಾತನಾಡುವುದು, ಆಟವಾಡುವುದು ಬಿಡಿ, ಆಕೆಯ ಹತ್ತಿರಕ್ಕೂ ಸುಳಿದಾಡುತ್ತಿರಲಿಲ್ಲ. ಆಕೆಯೂ ಯಾರೊಂದಿಗೂ ಆಟವಾಡುತ್ತಿರಲಿಲ್ಲ. ಯಾರಾದರೂ ಆಕೆಗೆ ಏನಾದರೂ ಹೇಳಿದರೆ ದುರುಗುಟ್ಟಿ ನೋಡುತ್ತಿದ್ದಳು ಮತ್ತು ಕೆಲವೊಮ್ಮೆ ಕೈ ಕಾಲುಗಳಿಂದ ಹೊಡೆಯಲು,

ಒದೆಯಲು ಪ್ರಯತ್ನ ಮಾಡುತ್ತಿದ್ದಳು. ಅವಳೊಂದಿಗೆ ಸುಮ್ಮನೆ ಮಾತನಾಡಲು ಹೋದರೂ ಇದೇ ರೀತಿ ಮಾಡುತ್ತಿದ್ದಳು. ಆಕೆಯ ಹೊಡೆತದಿಂದ ನಾನೊಬ್ಬಳು ತಪ್ಪಿಸಿಕೊಂಡಿದ್ದೇನೆ. ಆಕೆ ಅನೇಕ ಬಾರಿ ನನಗೆ ಕಚ್ಚಲು ಪ್ರಯತ್ನ ಮಾಡಿದ್ದಳು. ಯಾರೇ ಆದರೂ ಆಕೆಯ ನಡವಳಿಕೆಯನ್ನು ಗಮನಿಸಿದರೆ ಆಕೆ ನಮ್ಮ ಸಮಾಜಕ್ಕೆ ತಕ್ಕವಳಲ್ಲ ಎಂಬ ಭಾವನೆ ಬರುತ್ತಿತ್ತು.

ನಾವು ಒಟ್ಟು ಹನ್ನೆರಡು ಮಂದಿ ಶಿಕ್ಷಕರಿದ್ದೆವು. ಅವರಲ್ಲಿ ಅರುಣಾ ವಿ. ಜ್ಯೋತಿ ಕೂಡ ಒಬ್ಬರು. ಅವರು ಕೇವಲ ನಮ್ಮ ಸಹೋದ್ಯೋಗಿ ಮಾತ್ರ ಆಗಿರಲಿಲ್ಲ, ಬದಲಾಗಿ ಮಾರ್ಗದರ್ಶಿ ಕೂಡ ಆಗಿದ್ದರು ಎಂದರೆ ತಪ್ಪಲ್ಲ. ಬೋಧನೆಯ ಪ್ರಕ್ರಿಯೆಯಲ್ಲಿ ನಾವು ಎದುರಿಸುತ್ತಿದ್ದ ಸವಾಲುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅವರು ನಮಗೆ ಸರಿಯಾದ ನಿರ್ದೇಶನ ನೀಡುತ್ತಿದ್ದರು. ಕಳೆದ ಇಪ್ಪತ್ತೊಂದು ವರ್ಷಗಳಿಂದ ಅವರು ಶಾಲಾ ಶಿಕ್ಷಣದಲ್ಲಿ ಸಕ್ರಿಯರಾಗಿದ್ದಾರೆ. ಶಾಲೆಯನ್ನು ಸುಗಮವಾಗಿ ನಡೆಸಲು ಅಗತ್ಯವಿರುವ ಎಲ್ಲ ಆಲೋಚನೆಗಳನ್ನು ನಾವು ಹಂಚಿಕೊಳ್ಳುತ್ತಿದ್ದೆವು ಮತ್ತು ಆ ಬಳಿಕ ಯಾವುದೇ ನಿಯಮಗಳನ್ನು ರೂಪಿಸಿದ್ದರೂ ಅವುಗಳನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದೆವು. ಕೆಲವು ಅಭಿಪ್ರಾಯ ಭೇದಗಳು ನಮ್ಮ ನಡುವೆ ಇದ್ದವು ಎನ್ನುವುದು ನಿಜವಾದರೂ ಅವೆಲ್ಲವೂ ಆರೋಗ್ಯಕರವಾಗಿದ್ದವು.

ರಾಣಿ ಮಂಡಲ ನಡವಳಿಕೆಯ ಬಗ್ಗೆ ನಿಮಗೆ ಹೇಳಿದೆನಲ್ಲ, ಆಕೆಯ ವರ್ತನೆಯಿಂದ ಶಾಲೆಯ ಎಲ್ಲ ವಿದ್ಯಾರ್ಥಿಗಳು ಅಸಮಾಧಾನಗೊಂಡಿದ್ದರು. ಕಿರಿಕಿರಿಗೆ ಒಳಗಾಗಿದ್ದರು. ಆಕೆಯನ್ನು ನಿಭಾಯಿಸುವುದು ನನಗಂತೂ ಸವಾಲಾಗಿ ಪರಿಣಮಿಸಿತ್ತು. ಈ ವಿಷಯವನ್ನು ನಾನು ಅರುಣಾ ಅವರಲ್ಲಿ ಪ್ರಸ್ತಾಪ ಮಾಡಿದೆ. ಅವರು ಇದೊಂದು ಸವಾಲಿನ ಸಂಗತಿ ಎಂಬುದನ್ನು ಒಪ್ಪಿಕೊಂಡರಾದರೂ ಈ ವಿಚಾರವನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ನೀವೇ ನಿರ್ಧರಿಸಬೇಕು ಎಂದು ಹೇಳಿಬಿಟ್ಟರು. ಆದರೆ ಆಕೆ ಒಂದು ಎಚ್ಚರಿಕೆಯನ್ನು ಕೊಡುವುದನ್ನು ಮರೆಯಲಿಲ್ಲ. ಅದೇನೆಂದರೆ ರಾಣಿ ಜೊತೆ ನಾನೆಂದಿಗೂ ಜೋರಾಗಿ ಮಾತನಾಡಬಾರದು ಎಂದು. ಇದರಿಂದ ಆಕೆಯಲ್ಲಿ ಬದಲಾವಣೆ ತರುವ ಸಾಧ್ಯತೆ ಇದೆ ಎಂದೂ ತಿಳಿಸಿದರು.

ರಾಣಿ ತಾನಾಗಿಯೇ ಮಾತನಾಡುವ ಹೊರತು ಆಕೆಯೊಂದಿಗೆ ಯಾರೊಬ್ಬರೂ ಮಾತನಾಡಕೂಡದು ಎಂದು ನಾನು ಎಲ್ಲ ವಿದ್ಯಾರ್ಥಿಗಳಿಗೆ ಹೇಳಿದೆ. ಯಾರೊಬ್ಬರೂ ಆಕೆಗೆ ತೊಂದರೆ ಕೂಡ ಕೊಡಬಾರದು. ಮಕ್ಕಳು ಆಟವಾಡುತ್ತಿದ್ದರು, ಕಥೆ ಮತ್ತು ಕವಿತೆಗಳಲ್ಲಿ ಮುಳುಗಿ ಹೋಗುತ್ತಿದ್ದರು. ರಾಣಿ ಅವರನ್ನೆಲ್ಲ ದೂರದಿಂದ ನೋಡುತ್ತಿದ್ದಳು. ಆದರೆ ಯಾರೊಂದಿಗೂ

ಮಾತನಾಡುತ್ತಿರಲಿಲ್ಲ. ಕೆಲವು ದಿನಗಳವರೆಗೆ ಇದು ಮುಂದುವರಿಯಿತು. ಒಂದು ದಿನ ಮಕ್ಕಳೆಲ್ಲ ಆಟವಾಡುತ್ತಿದ್ದರು ಮತ್ತು ಕೆಲವರು ಕವಿತೆಗಳನ್ನು ಓದುತ್ತಿದ್ದರು. ಅಂತಹ ಕವಿತೆಗಳನ್ನು ಓದುವಾಗ ನಟಿಸುತ್ತಿದ್ದ ರೀತಿಯನ್ನು ನೋಡಿ ರಾಣಿಮಂಡಲನಾಗುವುದಕ್ಕೆ ಶುರು ಮಾಡಿದಳು. ಆಕೆ ನಗುತ್ತಿದ್ದುದನ್ನು ನೋಡಿ ನನಗೆ ತುಂಬ ಖುಷಿಯಾಯಿತು. ಈಗ ನಾನು ಆಕೆ ಇಷ್ಟಪಡುವ ಒಂದಲ್ಲ ಒಂದು ಚಟುವಟಿಕೆಯನ್ನು ಆರಂಭಿಸಲು ಶುರು ಮಾಡಿದೆ.

ಇನ್ನೊಂದು ದಿನ ಆಕೆಯೇ ಮುಂದೆ ಗುಂಪಿಗೆ ಬಂದು ಮಕ್ಕಳ ನಡುವೆ ನಿಂತು ಅವರಂದಿಗೆ ಚಪ್ಪಾಳೆ ಹೊಡೆಯಲು ಆರಂಭಿಸಿದಳು. ಆಗ ನಾನು ಆಕೆಯೊಂದಿಗೆ ಸಲ್ಪ ಮಾತನಾಡಿದೆ. ಅದಕ್ಕೆ ಆಕೆ ಕತ್ತು ಅಲ್ಲಾಡಿಸುತ್ತ ಕೆಲವು ಮಾತನಾಡಿದಳು. ಈಗ ನಾನು ಆಕೆಯ ಹೆಸರು ಹಿಡಿದು ನನ್ನ ಬಳಿಗೆ ಕರೆಯುತ್ತೇನೆ ಅಥವಾ ಆಕೆಯ ಹತ್ತಿರಕ್ಕೆ ಹೋಗುತ್ತೇನೆ, ಆಕೆಯೊಂದಿಗೆ ಕೆಲಸ ಮಾಡುತ್ತೇನೆ ಅಥವಾ ಆಕೆಯ ಪಕ್ಕದಲ್ಲಿ ಹೋಗಿ ಕುಳಿತುಕೊಳ್ಳುತ್ತೇನೆ. ಕೆಲವು ದಿನಗಳಲ್ಲೇ ನಾನು ಕರೆಯದೇ ಆಕೆ ನನ್ನ ಬಳಿಗೆ ಬರಲು ಆರಂಭಿಸಿದಳು. ಇತರ ಮಕ್ಕಳೊಂದಿಗೆ ಆಕೆಯ ವರ್ತನೆ ಕೂಡ ಬದಲಾಯಿತು. ಕಾಲಕ್ರಮೇಣ ರಾಣಿ ಇತರ ಮಕ್ಕಳ ಜೊತೆಗೆ ಬೆರೆಯಲು, ಆಟವಾಡಲು ತೊಡಗಿದಳು.

ಇನ್ನೊಂದು ದಿನ ನಾನು ಆಕೆಯ ಮನೆಗೆ ಹೋಗಬೇಕಾಗಿ ಬಂತು. ಅಲ್ಲಿಗೆ ಹೋಗಿ ನೋಡಿದಾಗ ಆಕೆಗೆ ಒಬ್ಬ ತಮ್ಮ ಇರುವುದು ತಿಳಿದುಬಂತು. ಮಕ್ಕಳು ಬೆಳಗ್ಗೆ ಏಳುವುದಕ್ಕೂ ಮೊದಲೇ ಅವರ ಪಾಲಕರು ಕೆಲಸಕ್ಕೆ ಹೋಗುತ್ತಿದ್ದರು. ಆಕೆಯ ತಮ್ಮನಿಗಿನ್ನೂ ಒಂದೂವರೆ ವರ್ಷ ವಯಸ್ಸು. ಆಕೆಯೇ ಮನೆಯನ್ನು ಸ್ವಚ್ಛಗೊಳಿಸಿ, ಪಾತ್ರೆಗಳನ್ನು ತೊಳೆಯುತ್ತಿದ್ದಳು. ಇಡೀ ದಿನ ತನ್ನ ತಮ್ಮನ ಕಾಳಜಿ ಮಾಡುತ್ತಿದ್ದಳು. ರಾಣಿ ಶಾಲೆಗೆ ಹೋದಾಗ ಆಕೆಯ ತಮ್ಮನನ್ನು ನೆರೆಹೊರೆಯವರು ನೋಡಿಕೊಳ್ಳುತ್ತಿದ್ದರು. ಆಕೆಯ ತಾಯಿ ಸಣ್ಣಪುಟ್ಟ ವಿಚಾರಗಳಿಗೆಲ್ಲ ಜಗಳ ಮಾಡುತ್ತಿದ್ದಳು, ಹೊಡೆಯುತ್ತಿದ್ದಳು. ಪಾಲಕ-ಶಿಕ್ಷಕರ ಸಭೆಗೆ ಆಕೆಯ ಪಾಲಕರು ಎಂದೂ ಬಂದವರಲ್ಲ.

ರಾಣಿಯ ಪಾಲಕರನ್ನು ಭೇಟಿಯಾಗುವ ಅವಕಾಶವೂ ನನಗೆ ಸಿಕ್ಕಿತು. ಒಂದು ದಿನ ಅವರು ಮಾರುಕಟ್ಟೆಯಲ್ಲಿ ಸಿಕ್ಕರು. ನಾನು ಅವರೊಂದಿಗೆ ರಾಣಿಮಂಡಲ್ ಬಗ್ಗೆ ಮಾತನಾಡಿದೆ. ರಾಣಿ ಈಗ ಮನೆಯಲ್ಲಿ ತನ್ನ ತಮ್ಮನೊಂದಿಗೆ ಕತೆಗಳನ್ನು ಮತ್ತು ಕವಿತೆಗಳನ್ನು ಹೇಳುತ್ತ ಕಾಲ ಕಳೆಯುತ್ತಿದ್ದಾಳೆ ಮತ್ತು ಕೆಲವು ಚಿತ್ರಗಳನ್ನೂ ಬಿಡಿಸುತ್ತಿದ್ದಾಳೆ ಎಂಬುದನ್ನು ತಿಳಿಸಿದರು ಮತ್ತು ಅದಕ್ಕಾಗಿ ನನಗೆ ಧನ್ಯವಾದ ಹೇಳಿದರು. ಅದಕ್ಕೆ ಸಂತೋಷ ವ್ಯಕ್ತಪಡಿಸಿದ ನಾನು, ಪಾಲಕ-ಶಿಕ್ಷಕರ ಸಭೆಗೆ ಹಾಜರಾಗುವಂತೆ ಅವರನ್ನು ಕೇಳಿಕೊಂಡೆ. ಪಾಲಕರ

ಸಮ್ಮುಖದಲ್ಲಿ ಮಕ್ಕಳನ್ನು ಶ್ಲಾಘಿಸಿದರೆ ಅವರು ಖುಷಿಯಾಗುತ್ತಾರೆ ಮತ್ತು ಇನ್ನಷ್ಟು ಪ್ರಯತ್ನಗಳನ್ನು ಮಾಡಲು ಮುಂದಾಗುತ್ತಾರೆ ಎಂಬ ಸಂಗತಿಯನ್ನು ಅವರಿಗೆ ಹೇಳಲು ಮರೆಯಲಿಲ್ಲ.

ರಾಣಿಮಂಡಲ್ 3ನೇ ತರಗತಿಯಲ್ಲಿದ್ದಾಗ *ಚಕಮಕ್*ಪತ್ರಿಕೆ ಯಿಂದ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿ ಆಕೆ ಒಂದು ಬಹುಮಾನವನ್ನು ಗಳಿಸಿದ್ದಳು. ಹಾಗೆ ಗೆದ್ದ ಬಹುಮಾನವನ್ನು ನನ್ನ ಬಳಿಗೆ ತಂದ ಆಕೆ "ನೋಡಿ ಟೀಚರ್, ನಾನು ಬಹುಮಾನ ಗೆದ್ದಿದ್ದೇನೆ. ನೀವು ನನ್ನ ಮೊದಲ ಟೀಚರ್. ಅದಕ್ಕೇ ನಿಮಗೆ ತೋರಿಸಬೇಕು ಎಂದು ಬಂದೆ" ಎಂದು ಹೇಳಿದಳು. ಇದನ್ನು ಕೇಳಿ ನನಗೆ ಎಲ್ಲಿಲ್ಲದ ಖುಷಿಯಾಯಿತು. ನನ್ನ ಕಣ್ಣುಗಳು ತೇವಗೊಂಡವು. ಆ ಕ್ಷಣವನ್ನು ನನಗೆ ಪದಗಳಲ್ಲಿ ವರ್ಣಿಸಲು ಸಾಧ್ಯವೇ ಇಲ್ಲ.

ಕಾಲ ಎಷ್ಟು ಬೇಗ ಸರಿದು ಹೋಗುತ್ತದೆಯೋ ತಿಳಿಯದು. ರಾಣಿಮಂಡಲ್ ಈಗ ಆರನೇ ತರಗತಿಯಲ್ಲಿದ್ದಾಳೆ. ಎರಡು ಉದ್ದದ ಜಡೆಗಳನ್ನು ಬಿಟ್ಟುಕೊಂಡು ಸಲ್ವಾರ್ಕ ಮೀಜ್ವಾಕಿ ಕೊಂಡು ಶಾಲೆಗೆ ಬರುತ್ತಾಳೆ. ನಾನು ಒಂದನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಇದ್ದಾಗ ಆಕೆ ತಾನಾಗಿಯೇ ಬಂದು ತರಗತಿಯ ಮಕ್ಕಳನ್ನು ನೋಡಿಕೊಳ್ಳುವ ಕೆಲಸದಲ್ಲಿ ನನಗೆ ಸಹಾಯ ಮಾಡುತ್ತಾಳೆ.

ಈ ಐದು ವರ್ಷಗಳಲ್ಲಿ ಒಬ್ಬ ಶಿಕ್ಷಕಿಯಾಗಿ ನಾನು ಬಹಳಷ್ಟು ಕಲಿತಿದ್ದೇನೆ. ಇದರಲ್ಲಿ ಬಹುದೊಡ್ಡ ಪಾಠವೆಂದರೆ ಯಾವತ್ತಿಗೂ ತಾಳ್ಮೆಯನ್ನು ಕಳೆದುಕೊಳ್ಳಬಾರದು ಎಂಬುದು. ಅರುಣಾ ಅವರು ಪ್ರತಿವರ್ಷ ತಪ್ಪದೆ ನಿರಂತರವಾಗಿ ಶಾಲೆಗೆ ಬರುತ್ತಿದ್ದಾರೆ. ನಾವು ಅವರೊಂದಿಗೆ ಎಲ್ಲವನ್ನು ಚರ್ಚೆ ಮಾಡುತ್ತೇವೆ. ಅವರು 'ಕೆಲವು ಸಂಗತಿಗಳಿಗೆ ಉತ್ತರಗಳಿರುವುದಿಲ್ಲ. ಕಾಲವೇ ನಮಗೆ ದಾರಿಯನ್ನು ತೋರಿಸುತ್ತದೆ. ನಮ್ಮ ಪ್ರಜ್ಞೆ ಮತ್ತು ಸಂವೇದನೆಗಳು ಎಲ್ಲವನ್ನೂ ಅರ್ಥಮಾಡಿಕೊಳ್ಳುವಂತೆ ಮತ್ತು ಅಗತ್ಯವಿರುವ ಪ್ರಯತ್ನ ಮಾಡುವಂತೆ ಪ್ರೇರೇಪಿಸುತ್ತವೆ' ಎಂದು ಹೇಳುತ್ತಾರೆ.

***

**ದೀಪಾಬಿಸ್ಟ್:** ಇವರು 2012 ರಿಂದ ಉಧಮ್-ಸಿಂಗ್ನ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಅವರು 2004 ರಿಂದಲೇ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಬಂದವರು. ವಿದ್ಯಾರ್ಥಿಗಳಿಂದಲೇ ನಾವು ಕಲಿಯುವುದು ಸಾಕಷ್ಟಿದೆ ಎಂದು ಅವರು ಬಲವಾಗಿ ನಂಬಿದ್ದಾರೆ. ಅವರನ್ನು ಸಂಪರ್ಕಿಸಬಹುದಾದ ಇಮೇಲ್-deepa.bisht@azimpremjifoundation.org